**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಆಳಂದ.**

ಸಿ.ಸಿ.ನಂ: ೪೬/೨೦೧೮ ಸಿ.ಡಬ್ಲ್ಯೂ –೦೮ ಪಿ.ಡಬ್ಲ್ಯೂ -೦೭

| | | |
|---|---|---|
| ಹೆಸರು | : | ಉದ್ದಂಡಪ್ಪ |
| ತಂದೆ:ಗಂಡ | : | ಜ್ಯೋತಿಬಾ |
| ವಯಸ್ಸು | : | ೫೬ ವರ್ಷ |
| ಉದ್ಯೋಗ | : | ಪಿ.ಐ. ಲೋಕಾಯುಕ್ತ ಬೀದರ |
| ವಾಸಸ್ಥಳ | : | ಬೀದರ |

ದಿನಾಂಕ: ೧೭.೦೯.೨೦೨೪
ಸತ್ಯ ಪ್ರತಿಜ್ಞೆಯ ಮೇರೆಗೆ

---

**ಮುಖ್ಯ ವಿಚಾರಣೆ ಮಾನ್ಯ ಸಸಅ ಅವರಿಂದ:**

ನಾನು ೦೨.೦೭.೨೦೧೬ ರಿಂದ ೧೮.೦೩.೨೦೧೮ ವರೆಗೆ ನಿಂಬರ್ಗಾ ಪೋಲಿಸ ಠಾಣೆಯಲ್ಲಿ ಪಿ.ಎಸ್.ಐ. ಎಂದು ಕಾರ್ಯ ನಿರ್ವಹಿಸಿದ್ದೇನೆ.

ದಿ: ೨೦.೦೭.೨೦೧೭ ರಂದು ಚಾಸಾ-೦೭ ರವರಿಂದ ಈ ಪ್ರಕರಣದ ಕಡತವನ್ನು ಪಡೆದುಕೊಂಡು ತನಿಖೆಯನ್ನು ಮುಂದುವರೆಸಿದೆನು. ಅದೇ ದಿನ ಘಟನಾ ಸ್ಥಳಕ್ಕೆ ಭೇಟಿ ನೀಟಿ ಚಾಸಾ-೧ ರವರು ತೊರಿಸಿದ ಜಾಗದಲ್ಲಿ ಚಾಸಾ-೨ ಮತ್ತು ೩ ರವರ ಸಮಕ್ಷಮ ಪಂಚನಾಮೆ ಜರುಗಿಸಿ ಪಂಚನಾಮೆ ಕಾಲಕ್ಕೆ ಕೆ.ಎ.೩೨-ಸಿ-೩೮೮೨ ರ ಭಾವಚಿತ್ರವನ್ನು ಪಡೆದುಕೊಂಡು ಕಡತದಲ್ಲಿ ಅಳವಡಿಸಿಕೊಂಡೆನು, ಮತ್ತು ನಾಲ್ಕು ಹಿಡಿಗಾತ್ರದ ಕಲ್ಲುಗಳನ್ನು ಒಂದು ಹಿಡಿಯಷ್ಟು ಒಡೆದ ಗ್ಲಾಸಿನ ಚೂರುಗಳನ್ನು ಪಡೆದುಕೊಂಡು ಕಡತದಲ್ಲಿ ಅಳವಡಿಸಿಕೊಂಡೆನು. ಸಾಕ್ಷಿಯು ನಿಪಿ-೧ರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಸಹಿಯನ್ನು ನಿಪಿ-೧(ಸಿ) ಎಂದು ಗುರುತಿಸಲಾಯಿತು. ಅದೇ ದಿನ ಚಾಸಾ-೧ ರವರ ಮರು ಹೇಳಿಕೆಯನ್ನು ಮತ್ತು ಚಾಸಾ-೪ ರಿಂದ ೬ ರವರ ಹೇಳಿಯನ್ನು ಪಡೆದುಕೊಂಡು ಕಡತದಲ್ಲಿ ಅಳವಡಿಸಿಕೊಂಡೆನು. ಅದೇ ದಿನ ಆರೋಪಿ ನಂ ೧ ರಿಂದ ೩ ರವರ ದಸ್ತಗೀರ ಕ್ರಮವನ್ನು ಅನುಸರಿಸಿ ಠಾಣಾ ಜಾಮೀನಿನ ಮೇಲೆ ಬಿಡುಗಡೆ ಮಾಡಿರುತ್ತೇನೆ.

[ ಈ ಹಂತದಲ್ಲಿ ಸ.ಅ.ಅ. ರವರು ಮುಂದುವರೆದ ಮುಖ್ಯ ವಿಚಾರಣೆಗೆ ಸಮಯಾವಕಾಶ ಕೋರಿದ್ದರಿಂದ ನೀಡಲಾಯಿತು ]

ಓ.ಹೇ.ಕೇ.ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಆಳಂದ.